ಹಾಪ್ ಕಾಮ್ಸ್ ಕಾರ್ಯ ನಿರ್ವಹಣೆ

508 (1002) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ನ್ಯಾಯಯುತ ಬೆಲೆ, ಖಾಸಗಿ ಮಾರಾಟಗಾರರ ಶೋಷಣೆಯನ್ನು ತಪ್ಪಿಸುವುದು, ಗುಣಮಟ್ಟದ ಮತ್ತು ಯೋಗ್ಯ ಬೆಲೆಗೆ ಗ್ರಾಹಕರುಗಳಿಗೆ ತರಕಾರಿ, ಹಣ್ಣುಹಂಪಲುಗಳನ್ನು ಒದಗಿಸಿಕೊಡುವಲ್ಲಿ ಇಲಾಖೆಯ ಯೋಜನೆಗಳೇನು;

ಆ) ಕಳೆದ ಎರಡು ವರ್ಷಗಳಲ್ಲಿ ಹಾಪ್‌ಕಾಮ್ಸ್ ಸಂಸ್ಥೆಯು ಲಾಭ ಗಳಿಸಿದೆಯೇ; (ವಿವರಗಳನ್ನು ನೀಡುವುದು);

ಶ್ರೀ ವಿ. ಉಮೇಶ್ ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಇಲಾಖೆಯ ಯೋಜನೆಗಳು ಈ ಕೆಳಕಂಡಂತಿವೆ.

1. ಕರ್ನಾಟಕ ರಾಜ್ಯ ತೋಟಗಾರಿಕೆ ಮಹಾಮಂಡಳಿ (KHF) ಸ್ಥಾಪಿಸಲಾಗಿದೆ. ಅದರ ವ್ಯಾಪ್ತಿಯಲ್ಲಿ 19 ಜಿಲ್ಲಾ ಹಾಪ್ ಕಾಮ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ.
2. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಈ ಹಾಪ್ ಕಾಮ್ಸ್‌ಗಳನ್ನು ಬಲಪಡಿಸಲು ರೂ. 8.5 ಕೋಟಿಗಳ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ.
3. ಬೆಲೆ ಕುಸಿತದ ಸಂದರ್ಭದಲ್ಲಿ ಬೆಂಬಲ ಬೆಲೆ ನೀಡಲಾಗುತ್ತಿದೆ. ಉದಾ: ಅಡಿಕೆ, ಒಣ ಕೊಬ್ಬರಿ, ಎಣ್ಣೆ ತಾಳೆ ಹಣ್ಣು.,
4. NHM ಯೋಜನೆ ಅಡಿ ಮಾರುಕಟ್ಟೆ ಮೂಲ ಸೌಲಭ್ಯಗಳನ್ನು ಕಲ್ಪಿಸಲು APMC ಗಳಿಗೆ ನೆರವು ನೀಡಲಾಗುತ್ತಿದೆ.
5. ಶೀತಲ ಗೃಹ ನಿರ್ಮಾಣ, ಶೀತಲ ವಾಹನ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ.

6. ರಾಜ್ಯದ ನಾಲ್ಕು ಸ್ಥಳಗಳಲ್ಲಿ ಶಿವಮೊಗ್ಗ, ಬೆಳಗಾಂ, ಕೋಲಾರ ಮತ್ತು ಹಾಸನಗಳಲ್ಲಿ ಖಾಸಗಿ ವಲಯದಡಿ ಆಧುನಿಕ ಸಗಟು ಹಣ್ಣು ಮತ್ತು ತರಕಾರಿ ಮಾರುಕಟ್ಟೆ ನಿರ್ಮಿಸಲು ಅನುಮೋದನೆ ನೀಡಲಾಗಿದ್ದು, ಅಗತ್ಯವಿರುವ ಜಾಗದ ಭೂಸ್ವಾಧೀನ ಪ್ರಗತಿಯಲ್ಲಿದೆ.
7. ಶೀತಲ ಗೃಹಗಳಲ್ಲಿ ಹಣ್ಣು ತರಕಾರಿ ಶೇಖರಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಅವು ಬಳಸುವ ವಿದ್ಯುಚ್ಛಕ್ತಿ ಪ್ರತಿ ಯೂನಿಟ್‌ಗೆ 1 ರೂ. ಸಹಾಯಧನ ನೀಡಲಾಗುತ್ತಿದೆ.
8. ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ ನೆರವು ನೀಡಲಾಗುತ್ತಿದೆ.

ಆ) ಹೌದು.

ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಅನುಬಂಧ – 1

ಕ್ರ ಸಂ.	ಜಿಲ್ಲಾ ಹಾಪ್‌ಕಾಮ್ಸ್	ಲಾಭ (ರೂಗಳಲ್ಲಿ)		ನಷ್ಟ (ರೂಗಳಲ್ಲಿ)	
		2007–08	2008–09	2007–08	2008–09
1	ಬೆಂಗಳೂರು ಹಾಪ್‌ಕಾಮ್ಸ್	6817000	15333000	0	0
2	ಬೀದರ್	138817	193485	0	0
3	ಮಡಿಕೇರಿ	106431	33651	0	0
4	ಮಂಡ್ಯ	298000	301000	0	0
5	ಹಾಸನ	644335	67301	118109	0
6	ಮೈಸೂರು	984000	1483000	0	0
7	ರಾಯಚೂರು	70055	61644	0	0
8	ಬೆಳಗಾಂ	0	0	136260	102994
9	ಮಂಗಳೂರು	0	108517	204141	0
10	ಗುಲ್ಬರ್ಗಾ	225000	175000	0	0
11	ತುಮಕೂರು	33408	60050	60643	0

12	ಚಿತ್ರದುರ್ಗ	56755	23967	0	0
13	ಬಿಜಾಪುರ	29324	34995	0	0
14	ಬಳ್ಳಾರಿ	0	0	0	0
15	ಧಾರವಾಡ	0	0	0	0
16	ಶಿವಮೊಗ್ಗ	52128	33977	0	0
17	ಶಿರಸಿ	142041	134391	0	0
18	ದಾವಣಗೆರೆ	6950	14590	0	0
	ಒಟ್ಟು	**9604244**	**18058568**	**519153**	**102994**

ರೈತರ ಚೀನಾ ಅಧ್ಯಯನ ಪ್ರವಾಸ

509 (1003) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಚೀನಾ ಅಧ್ಯಯನ ಪ್ರವಾಸದ ಸೌಲಭ್ಯಗಳನ್ನು ಎಷ್ಟು ಜನ ರೈತರಿಗೆ ಒದಗಿಸಿಕೊಡಲಾಗಿದೆ; ಅಧ್ಯಯನ ಪ್ರವಾಸದ ಉಪಯುಕ್ತತೆಯನ್ನು ಸರ್ಕಾರ ಕೃಷಿ ಕ್ಷೇತ್ರದಲ್ಲಿ ಯಾವ ರೀತಿಯಲ್ಲಿ ಬಳಸಿಕೊಳ್ಳಲು ಉದ್ದೇಶಿಸಿದೆ;

ಆ) ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಸುಧಾರಣೆಗಾಗಿ ಸರ್ಕಾರದ ವಿವಿಧ ಪ್ರಗತಿ ಪರ ಯೋಜನೆಗಳೇನು;

ಇ) ಪ್ರಕೃತಿ ವಿಕೋಪ ಮುಂತಾದ ಆಪತ್ತುಗಳಿಂದ ರೈತರನ್ನು ಸಂರಕ್ಷಿಸಲು ಸರ್ಕಾರದ ಮುಂಜಾಗರುಕತಾ ಕ್ರಮಗಳೇನು?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ರೈತರ ಚೀನಾ ಅಧ್ಯಯನ ಪ್ರವಾಸದ ಸೌಲಭ್ಯಗಳನ್ನು 633 ಜನ ರೈತರಿಗೆ ಒದಗಿಸಿಕೊಡಲಾಗಿದೆ. ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ಸರ್ಕಾರವು ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅಧ್ಯಯನ ಪ್ರವಾಸದ ಉಪಯುಕ್ತತೆಯನ್ನು ಬಳಸಕೊಳ್ಳಲು ಉದ್ದೇಶಿಸಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.